ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:1767/2024
ಸಿ.ಡಬ್ಲ್ಯು 1 ಪಿ.ಡಬ್ಲೂ : 1

| | |
|---|---|
| ಸಾಕ್ಷಿದಾರರ ಹೆಸರು | ಶೇಕಬ್ಬ ಅಬೂ ಮಹಮ್ಮದ್ |
| ತಂದೆಯ ಹೆಸರು | ಹೆಚ್ ಎ ಮಹಮ್ಮದ್ |
| ವಯಸ್ಸು | 50 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಮೂಳೂರು |

ದಿನಾಂಕಃ 27-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಸಾಕ್ಷಿಯವರು 4 ದಾಖಲೆಗಳನ್ನು ನೋಡಿ ಅವುಗಳಲ್ಲಿ ನನ್ನ ಸಹಿ ಇದೆ ಎಂದು ಗುರುತಿಸಿದ್ದು, ಸದ್ರಿ ದಾಖಲೆಗಳು ದೂರು ಸ್ಥಳ ಪಂಚನಾಮೆ , ಕಚ್ಚಾ ನಕ್ಷೆ ಸ್ವತ್ತು ಸ್ವಾಧೀನ ಪಂಚನಾಮೆಯಾಗಿದ್ದು ಅವುಗಳನ್ನು ಕ್ರಮವಾಗಿ ನಿಪಿ 1 ರಿಂದ 4 ಎಂದು, ಸಾಕ್ಷಿಯವರ ಸಹಿಯನ್ನು ನಿಪಿ. 1 ಎ, 2 ಎ, 3 ಎ, ಮತ್ತು 4 ಎ ಎಂದು ಗುರುತಿಸಲಾಯಿತು. ನಿಪಿ 1 ರಿಂದ 4 ರಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ. ಸುಮಾರು 2 ವರುಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ.

ನಾನು ಯಾವುದೇ ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಅಪಘಾತದ ವಿಚಾರವಾಗಿ ಯಾವುದೇ ದೂರನ್ನು ನೀಡಿರುವುದಿಲ. ಅಪಘಾತದ ವಿಚಾರವಾಗಿ ಯಾವುದೇ ಸ್ಥಳ ವನ್ನು ತೋರಿಸಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ವಾಹನವನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ. ನನಗೆ ಆರೋಪಿಯವರ ಪರಿಚಯ ಇರುವುದಿಲ್ಲ ಮತ್ತು ನಾನು ಇದುವರೆಗೂ ನೋಡಿರುವುದಿಲ್ಲ.

ಸಾಕ್ಷಿಯವರು 2 ಭಾವಚಿತ್ರಗಳನ್ನು ನೋಡಿ ಅವುಗಳಲ್ಲಿ ನಾನು ಇರುತ್ತೇನೆಂದು ಗುರುತಿಸಿದ್ದು ಸದ್ರಿ ಭಾವಚಿತ್ರಗಳನ್ನು ನಿಪಿ 5 ಮತ್ತು 6 ಎಂದು ಗುರುತಿಸಲಾಯಿತು. ನಿಪಿ 5 ಮತ್ತು 6 ನ್ನು ಯಾವ ದಿನದಂದು ಮತ್ತು ಯಾವ ಸಂದರ್ಭದಲ್ಲಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ನಿಪಿ 6 ರಲ್ಲಿ ಕಾಣುವ ವಾಹನವು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ.

ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿ ಕೂಲ ಸಾಕ್ಷಿ ಎಂದು ತಿಳಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ಅನುಮತಿಯನ್ನು ನೀಡಲಾಯಿತು.

**ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 14-02-2024 ರಂದು ಬೆಳಿಗ್ಗೆ 10.15 ರ ಸಮಯದಲ್ಲಿ ನಿಪಿ 6 ರಲ್ಲಿ ಕಾಣುವ ವಾಹನವನ್ನು ಈ ಪ್ರಕರಣದ ಆರೋಪಿಯವರು ಬಡಾ ಗ್ರಾಮದ ಉಚ್ಚಿ ಲ ಪೇಟೆಯಲ್ಲಿರುವ ಬ್ಲೂ ವೇವ್ ಕಟ್ಟಡದ ಎದುರು ಪಡುಬಿದ್ರಿ ಕಡೆಯಿಂದ ಕಾಪು ಕಡೆಗೆ ಎನ್ ಹೆಚ್ 66 ರಲ್ಲಿ ಅತೀ ವೇಗ ಮತ್ತು ಅಜಾಗರೂಕತೆಯಲ್ಲಿ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಡಿವೈಡರ್ ನ ಬಳಿ ನಿಂತಿದ್ದ ಚಾಸಾ 2 ರವರಿಗೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 2 ರವರಿಗೆ ತೀವ್ರ ಸ್ವರೂಪದ ಗಾಯವಾಗಿದ್ದು ಅವರನ್ನು ಉಡುಪಿಯ ಆದರ್ಶ ಆಸ್ಪತ್ರೆಗೆ ಚಿಕಿತ್ಸೆ ಗಾಗಿ ಕಳುಹಿಸಿಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಘಟನೆಯ ವಿಚಾರವಾಗಿ ಆರೋಪಿಯವರ ವಿರುದ್ಧ ನಿಪಿ 1 ರಂತೆ ದೂರು ನೀಡಿರುತ್ತೀರಿ ಎಂದರೆ ಸರಿಯಲ್ಲ.

ಅದೇ ದಿನ ಪೊಲೀಸಿನವರಿಗೆ ತಕ್ಷೀರು ಸ್ಥಳ ವನ್ನು ನೀವು ತೋರಿಸಿಕೊಟ್ಟಿದ್ದ ಪೊಲೀಸಿನವರು ನಿಪಿ 2 ರಂತೆ ಮದ್ಯಾಹ್ನ 2.45 ರಿಂದ 3.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆದೇ ವೇಳೆ ನಿಪಿ 3 ನ್ನು ತಯಾರಿಸಿರುತಾರೆ ಎಂದರೆ ಸರಿಯಲ್ಲ. ಅದೇ ವೇಳೆ ನಿಪಿ 5 ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಪೊಲೀಸ್ ಠಾಣೆ ಯಲ್ಲಿ ನಿಪಿ 6 ರಲ್ಲಿ ಕಾಣಿಸುವ ವಾಹನವನ್ನು ನಿಪಿ 4 ರಂತೆ ಪಂಚನಾಮೆಯನ್ನು ಮಾಡಿ ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವನ್ನು ನೀವು ಪ್ರತ್ಯಕ್ಷವಾಗಿ ನೋಡಿದ್ದರೂ ಆರೋಪಿಯವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ. ಸಿ. ಎಸ್ ವಕೀಲರಿಂದಃ**

ಪಾಟೀ ಸವಾಲು ಇಲ್ಲವೆಂದು ಮನವಿ ಮಾಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.